# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 67(ಹಳೆಯ ಸಂಖ್ಯೆ-19), ಸಂಜಯನಗರ. ಬೆಂಗಳೂರು.

ಸಂಖ್ಯೆ: ಸ.ಅ/ವಾ-67(ಹಳೆಯ ಸಂಖ್ಯೆ-19)/ಪಿ.ಆರ್/25 /2022-23 ದಿನಾಂಕ:-01-10-2022

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಿಷಯ: ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ:-21-09-2020. ರವರ ಆದೇಶದಂತೆ ದಿನಾಂಕ:-01-10-2022 ರಂದು ವಾರ್ಡ್ ನಂ: 67(ಹಳೆಯ ಸಂಖ್ಯೆ-19) ಸಂಜಯನಗರ ಸೆಂಟ್ರಲ್ ಎಕ್ಸೈಜ್ ಲೇಔಟ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

: ಸಭೆಗೆ ಹಾಜರಾಗಿದ್ದವರ ವಿವರಗಳು::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಷರಾ |
|---|---|---|---|
| 1. | ಶ್ರೀಮತಿ. ಜ್ಯೋತಿ.ಜಿ ಚೌಳೂಲ್ಕರ್ ಸ.ಕಾ.ನಿ (ಘ.ತ್ಯಾ.ನಿ) ಪುಲಿಕೇಶಿ ನಗರ ವಿಭಾಗ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು | |
| 2. | ಶ್ರೀ. ನವನಾಥ್ | ಸದಸ್ಯ ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು ವಾರ್ಡ್ ನಂ: 67(ಹಳೆಯ ಸಂಖ್ಯೆ-19) | |
| 3. | ಶ್ರೀ. ಸಲ್ಮಾನ್ | ಹಿರಿಯ ಆರೋಗ್ಯ ಪರಿವೀಕ್ಷಕರು. | |
| 4. | ದಸ್ತಗಿರ್ ಬಾಷಾ | ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ | |
| 5. | ಶ್ರೀ.ವೆಂಕಟೇಶ್ | ತೋಟಗಾರಿಕಾ ಇನ್ಸ್‌ಪೆಕ್ಟರ್, ತೋಟಗಾರಿಕಾ ಇಲಾಖೆ. | |
| 6. | ಬೀದಿ ದೀಪ ನಿರ್ವಾಹಕರು | Street light Incharge, B B M P. | |
| 7. | ಶ್ರೀ.ಪ್ರಕಾಶ್, ಮಾರುತಿ ರಾವ್ ಮತ್ತು ಇತರರು | ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು | |

ವಾರ್ಡ್ ಕಾರ್ಯದರ್ಶಿಗಳಾದ ಶ್ರೀ.ನವನಾಥ್, ಸಹಾಯಕ ಅಭಿಯಂತರರು ರವರು ಸಭೆಗೆ ಹಾಜರಾದ ಅಧ್ಯಕ್ಷರು, ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀಮತಿ ಜ್ಯೋತಿ.ಜಿ ಚೋಳೂಲ್ಕರ್ ರವರಿಗೆ ಮತ್ತು ಸಭೆಯಲ್ಲಿ ಸೇರಿದ ಸಾರ್ವಜನಿಕ್ಕರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

**ಘನತ್ಯಾಜ್ಯ ನಿರ್ವಹಣೆ:-**

1. ವಾರ್ಡ್‌ನ ಘನತ್ಯಾಜ್ಯವನ್ನು ಸಮರ್ಪಕವಾಗಿ ನಿರ್ವಹಿಸಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು.

**ಬೀದಿ ದೀಪಗಳ ನಿರ್ವಹಣೆ:-**

1. ವಾರ್ಡ್‌ನ ಬೀದಿ ದೀಪಗಳನ್ನು ಸಮರ್ಪಕವಾಗಿ ನಿರ್ವಹಿಸಿದೆ ಇರುವ ಬಗ್ಗೆ ಸಾರ್ವಜನಿಕರು ತಿಳಿಸಿದರು. ಈ ಬಗ್ಗೆ ಗಮನಹರಿಸಿ ಬೀದಿ ದೀಪಗಳನ್ನು ಸಮರ್ಪಕವಾಗಿ ನಿರ್ವಹಿಸಿಸಲು ಹಾಗೂ ಪ್ರತಿದಿನ ವಾರ್ಡ್‌ನ ಎಲ್ಲಾ ಬೀದಿಗಳಲ್ಲಿ ಪರಿಶೀಲನೆ ಮಾಡಿ ಕಾರ್ಯನಿರ್ವಹಿಸದೇ ಇರುವ ಬೀದಿ ದೀಪಗಳನ್ನು ಹುಡುಕಿ ಸರಿಪಡಿಸಬೇಕಾಗಿ ಬೀದಿ ದೀಪಗಳ ನಿರ್ವಹಣೆಯ ಗುತ್ತಿಗೆದಾರರಿಗೆ ತಿಳಿಸಲಾಯಿತು ಮತ್ತು ಗುತ್ತಿಗೆದಾರರಿಗೆ ವಾರ್ಡ್‌ನ ಎಲ್ಲಾ ಬೀದಿ ದೀಪಗಳನ್ನು ಸರಿಯಾಗಿ ನಿರ್ವಹಣೆ ಮಾಡಲು ಒಂದು ತಿಂಗಳ ಸಮಯವನ್ನು ಕೊಟ್ಟು ಆದಾಗ್ಯೂ ಸಮರ್ಪಕವಾಗಿ ನಿರ್ವಹಣೆ ಮಾಡದಿದ್ದಲ್ಲಿ ಗುತ್ತಿಗೆದಾರರಿಗೆ ಸಂಬಂಧಪಟ್ಟ ಅಧಿಕಾರಿಗಳಿಂದ ನೋಟೀಸ್ ನೀಡುವುದಾಗಿ ನೋಡಲ್ ಅಧಿಕಾರಿಗಳು ತಿಳಿಸಿದರು. (ಹಿಂದಿನ ನಡವಳಿಯಿಂದ ಮುಂದುವರೆಸಲಾಗಿದೆ.)

**ಬೃಹತ್ ನೀರು ಕಾಲುವೆ:-**

1. ವಾರ್ಡ್‌ನಲ್ಲಿ ಹಾದು ಹೋಗುತ್ತಿರುವ ಬೃಹತ್ ನೀರು ಕಾಲುವೆಗಳಲ್ಲಿ ಕಸ ಕಡ್ಡಿ ತುಂಬಿರುತ್ತದೆ, ಹಲ್ಲು ಬೆಳೆದಿರುತ.ದೆ ಮತು. ಬ.ಹತ್ ನೀರು ಕಾಲುವೆಗಳ ಗೋಡೆಗಳು (ಕೆಲವು ಕಡೆ) ಕುಸಿದಿರುತ.ವೆ ಎಂದು

Scanned with CamScanner

ಸಾರ್ವಜನಿಕರು ತಿಳಿಸಿದರು. ಈ ಬಗ್ಗೆ ಗಮನ ಹರಿಸಿ ಬೃಹತ್ ನೀರು ಕಾಲುವೆಗಳನ್ನು ಡಿ ಸಿಲ್ಟ್ ಮಾಡಲು ಮತ್ತು ಕಾಲುವೆ ಗೋಡೆಗಳನ್ನು ಸರಿಪಡಿಸಬೇಕಾಗಿ ಬೃಹತ್ ಮಳೆ ನೀರು ಕಾಲುವೆ ನಿರ್ವಹಣೆ ಮಾಡುವ ಅಧಿಕಾರಿಗಳು ತಿಳಿಸಲು ಬಿ.ಬಿ.ಎಂ.ಪಿ ಸಹಾಯಕ ಅಭಿಯಂತರರಿಗೆ ನೋಡಲ್ ಅಧಿಕಾರಿಗಳು ತಿಳಿಸಿದರು. (ಹಿಂದಿನ ನಡವಳಿಯಿಂದ ಮುಂದುವರೆಸಲಾಗಿದೆ.)

2. ಡೆಫೋಡಿಯಲ್ ಸ್ಕೂಲ್ ಹಿಂಭಾಗದ ಬೃಹತ್ ನೀರು ಕಾಲುವೆಯನ್ನು ಒತ್ತುವರಿ ಮಾಡಿಕೊಂಡು ವಾಹನಗಳ ಪಾರ್ಕಿಂಗ್‌ಗಾಗಿ ಉಪಯೋಗಿಸುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದರಿಂದ ಒತ್ತುವರಿಯನ್ನು ತೆರವುಗೊಳಿಸಿ ಸಂಚಾರಕ್ಕೆ ಅನುಕೂಲ ಮಾಡಿಕೊಡುವಂತೆ ಸಾರ್ವಜನಿಕರು ಕೋರಿದರು. ಬೃಹತ್ ಮಳೆ ನೀರು ಕಾಲುವೆ ನಿರ್ವಹಣೆ ಮಾಡುವ ಅಧಿಕಾರಿಗಳಿಗೆ ತಿಳಿಸಲು ಬಿ.ಬಿ.ಎಂ.ಪಿ ಸಹಾಯಕ ಅಭಿಯಂತರರಿಗೆ ನೋಡಲ್ ಅಧಿಕಾರಿಗಳು ತಿಳಿಸಿದರು.

**ಆರೋಗ್ಯ ಇಲಾಖೆ:-**

1. ವಾರ್ಡ್‌ನ ವಿವಿಧ ಸ್ಥಳಗಳಲ್ಲಿ ಮುಖ್ಯವಾಗಿ ನಾಗಶೆಟ್ಟಿಹಳ್ಳಿ ದೇವಸ್ಥಾನದ ಹಿಂಭಾಗದಲ್ಲಿ ನೀರು ನಿಂತು ಸೊಳ್ಳೆಗಳ ಕಾಟ ಹೆಚ್ಚಾಗುತ್ತಿರುವುದರಿಂದ ಸ್ಪ್ರೇಯನ್ನು ಸಿಂಪಡಿಸಬೇಕಾಗಿ ಆರೋಗ್ಯಾಧಿಕಾರಿಗಳಿಗೆ ತಿಳಿಸಲಾಯಿತು.

**ಕಾಮಗಾರಿ ಇಲಾಖೆ:-**

1. ವಾರ್ಡ್‌ನ ಪೊಸ್ಟಲ್ ಕಾಲೋನಿಯಲ್ಲಿ ರಸ್ತೆಗಳು ಹಾಳಾಗಿರುವ ಬಗ್ಗೆ ಸಾರ್ವಜನಿಕರು ದೂರಿದರು. ಮುಂದಿನ ಕ್ರಿಯಾ ಯೋಜನೆಯನ್ನು ತಯಾರಿಸುವಾ ಸದರಿ ರಸ್ತೆಗಳನ್ನು ಸೇರಿಸಿಕೊಂಡು ಅಂದಾಜುಪಟ್ಟಿಯನ್ನು ತಯಾರಿಸುವುದಾಗಿ ಬಿ.ಬಿ.ಎಂ.ಬಿ ಅಭಿಯಂತರರು ಸಾರ್ವಜನಿಕರಿಗೆ ತಿಳಿಸಿದರು. ಎ.ಇ.ಸಿ.ಎಸ್ ಲೇಔಟ್‌ನ 16ನೇ ಅಡ್ಡರಸ್ತೆ ಮತ್ತು 7ನೇ ಮುಖ್ಯರಸ್ತೆಯಲ್ಲಿ ರಸ್ತೆ ಬದಿಯ ಮೋರಿಗಳು ಕಟ್ಟಿಕೊಂಡಿರುವುದಾಗಿ ಸಾರ್ವಜನಿಕರು ತಿಳಿಸಿದರು. ಸದರಿ ಮೋರಿಗಳನ್ನು ಡಿಸಿಲ್ಟಿಂಗ್ ಮಾಡಿಕೊಡಲು ನೋಡಲ್ ಅಧಿಕಾರಿಗಳು ಬಿ.ಬಿ.ಎಂ.ಪಿ ಸಹಾಯಕ ಅಭಿಯಂತರರಿಗೆ ತಿಳಿಸಿದರು.

**ಕಂದಾಯ ಇಲಾಖೆ:-**

1. ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಾಗಬೇಕಾಗಿ ತಿಳಿಸಿದರು. ಹಾಗೂ ವಾರ್ಡ್‌ನ ಗಡಿಯನ್ನು ಗುರುತಿಸುವುದು ಮತ್ತು ಮತದಾರರ ಗುರುತಿನ ಚೀಟಿಯನ್ನು ಪಾನ್‌ಕಾರ್ಡ್ ಜೊತೆ ಲಿಂಕ್ ಮಾಡುವ ಬಗ್ಗೆ ಜನರಿಗೆ ತಿಳುವಳಿಕೆ ನೀಡಲು ನೋಡಲ್ ಅಧಿಕಾರಿಗಳು ಸ್ರಚಿಸಿದರು ಹಾಗೂ ಹೊಯ್ಸಳ ಅಪಾರ್ಟ್‌ಮೆಂಟ್ ಹಿಂದೆ ಇರುವ ಖಾಲಿ ನಿವೇಶನಗಳ ಮಾಲೀಕರ ಹೆಸರು ಮತ್ತು ವಿಳಾಸಗಳನ್ನು ತಿಳಿದುಕೊಂಡು ವಾರ್ಡ್ ಅಭಿಯಂತರರಿಗೆ ಕೊಡಬೇಕಾಗಿ ತಿಳಿಸಿದರು. (ಹಿಂದಿನ ನಡವಳಿಯಿಂದ ಮುಂದುವರೆಸಲಾಗಿದೆ.)

**ಉದ್ಯಾನವನ:-**

1. ವಾರ್ಡ್‌ನ ವಿನಾಯಕ ಲೇಔಟ್ ಪಾರ್ಕ್, ಸೆಂಟ್ರಲ್ ಎಕ್ಸೈಜ್ ಲೇಔಟ್ ಪಾರ್ಕ್ ಮತ್ತು ರಘುವನ ಪಾರ್ಕ್‌ಗಳ ಸಮರ್ಪಕವಾಗಿ ನಿರ್ವಹಣೆ ಮಾಡದಿರುವ ಬಗ್ಗೆ ಸಾರ್ವಜನಿಕರು ದೂರಿದರು. ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ತೋಟಗಾರಿಕಾ ಇಲಾಖೆಯ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು. ಪಾರ್ಕ್‌ನಲ್ಲಿ ಅಳವಡಿಸಿರುವ ಜಿಮ್ ಮತ್ತು ಮಕ್ಕಳು ಆಟ ಆಡುವ ಉಪಕರಣಗಳನ್ನು ಬಿ.ಬಿ.ಎಂ.ಪಿ ಯೋಜನಾ ವಿಭಾಗದವರು ನಿರ್ವಹಣೆ ಮಾಡಬೇಕಾಗಿದ್ದು, ಸದರಿ ಅದಿಕ್ಹರಿಗಳು ಮುಂದಿನ ಸಭೆಯಲ್ಲಿ ಕಡ್ಡಾಯವಾಗಿ ಹಾಜರಿರುವಂತೆ ನೋಟೀಸ್ ನೀಡಲು ನೋಡಲ್ ಅಧಿಕಾರಿಗಳು ಸ್ರಚಿಸಿದರು. (ಹಿಂದಿನ ನಡವಳಿಯಿಂದ ಮುಂದುವರೆಸಲಾಗಿದೆ.)
2. ವಾರ್ಡ್‌ನ ಪಾರ್ಕ್‌ಗಳ ನಿರ್ವಹಣೆಗಾಗಿ ವಿವಿಧ ಇಲಾಖೆಗಳ ನಡುವಿನ ಪತ್ರ ವ್ಯವಹಾರಗಳನ್ನು ಕ್ರೂಢೀಕರಿಸಿ ಮುಂದಿನ ಕ್ರಮ ಕೈಗೊಳ್ಳಲು ವಾರ್ಡ್ ಸಮಿತಿ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

**ಅರಣ್ಯ ಇಲಾಖೆ:-**

1. ಇಲ್ಲಿಯವರೆಗೂ ಯಾವುದೇ ಸಭೆಗೂ ಅರಣ್ಯಾಧಿಕಾರಿಗಳು ಹಾಜರಾಗದಿರುವ ಬಗ್ಗೆ ನೋಡಲ್ ಅಧಿಕಾರಿಗಳು ವಿಷಾದ ವ್ಯಕ್ತ ಪಡಿಸಿದರು. ಮತ್ತು ಸದರಿ ಅಧಿಕಾರಿಗಳಿಗೆ ವಾರ್ಡ್ ಸಭೆಗೆ ಹಾಜರಾಗಲು ಪತ್ರ ಮುಖಾಂತರ ತಿಳಿಸಲು ನೋಡಲ್ ಅಧಿಕಾರಿಗಳು ಸೂಚಿಸಿದರು. (ಹಿಂದಿನ ನಡವಳಿಯಿಂದ ಮುಂದುವರೆಸಲಾಗಿದೆ.)
2. ವಾರ್ಡ್‌ನಲ್ಲಿ ಬರುವ ವಿನಾಯಕ ಲೇಔಟ್, ಆರ್.ಎಂ.ಎಸ್ ಲೇಔಟ್ ಮತ್ತು ಸೆಂಟ್ರಲ್ ಎಕ್ಸೈಜ್ ಲೇಔಟ್‌ನಲ್ಲಿ ಜೋತುಬಿದ್ದಿರುವ ಮರದ ಕೊಂಬೆಗಳನ್ನು ಕತ್ತರಿಸಲು ಅರಣ್ಯಾಧಿಕಾರಿಗಳಿಗೆ ಸೂಚಿಸುವಂತೆ ನೋಡಲ್ ಅಧಿಕಾರಿಗಳು ಬಿ.ಬಿ.ಎಂ.ಪಿ ಅಭಿಯಂತರರಿಗೆ ತಿಳಿಸಿದರು. ಅರಣ್ಯ ಇಲಾಖೆಯ ಅಧಿಕಾರಿಗಳು ಸಭೆಗೆ ಹಾಜರಾಗದಿರುವ ಬಗ್ಗೆ ವಿಷಾದ ವ್ಯಕ್ತ ಪಡಿಸಿ ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಿರುವಂತೆ ಸೂಚಿಸಿದರು. (ಹಿಂದಿನ ನಡವಳಿಯಿಂದ ಮುಂದುವರೆಸಲಾಗಿದೆ.)

Scanned with CamScanner

ಪಶುಸಂಗೋಪನೆ:-

1. ಪಶು ಸಂಗೋಪನಾಧಿಕಾರಿಗಳಿಗೆ ವಾರ್ಡ್‌ನಲ್ಲಿರುವ ಅನಧಿಕೃತ ಮಾಂಸ ಮಾರಟ ಮಳಿಗೆಗಳನ್ನು ಗುರುತಿಸಿ ತೆರವುಗೊಳಿಸಲು ಮತ್ತು ಮಾಂಸ ತ್ಯಾಜ್ಯ ನಿರ್ವಹಣೆ ಬಗ್ಗೆ ಗಮನ ಹರಿಸಲು ನೋಡಲ್ ಅಧಿಕಾರಿಗಳು ಸೂಚಿಸಿದರು. (ಹಿಂದಿನ ನಡವಳಿಯಿಂದ ಮುಂದುವರೆಸಲಾಗಿದೆ)

ಬಿ.ಡಬ್ಲ್ಯೂ.ಎಸ್.ಎಸ್.ಬಿ:-

1. ವಾರ್ಡ್‌ನ ಸೆಂಟ್ರಲ್ ಎಕ್ಸೈಜ್ ಲೇಔಟ್‌ನ 1ನೇ ಎ ಕ್ರಾಸ್, 1ನೇ ಮುಖ್ಯರಸ್ತೆ, ವಿನಾಯಕ ಬಡಾವಣೆಯಲ್ಲಿ ಮ್ಯಾನ್‌ಹೋಲ್‌ಗಳು ಸಿಂಕ್ ಆಗಿರುವ ಬಗ್ಗೆ ಸಾರ್ವಜನಿಕರು ತಿಳಿಸಿದರು. ಸದರಿ ಮ್ಯಾನ್‌ಹೋಲ್‌ಗಳನ್ನು ಸರಿಪಡಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರವರಿಗೆ ನೋಡಲ್ ಅಧಿಕಾರಿಗಳು ತಿಳಿಸಿದರು.
2. ವಾರ್ಡ್‌ನ ಪೋಸ್ಟಲ್ ಕಾಲೋನಿಯಲ್ಲಿ ಡಿ ಸಿಲ್ಟಿಂಗ್ ಮಾಡಲು ಸಾರ್ವಜನಿಕರು ತಿಳಿಸಿದರು. ಮತ್ತು ಆರ್.ಎಂ.ಎಸ್ ಕಾಲೋನಿಯಲ್ಲಿ ವಾಟರ್ ಪ್ರೇಜರ್ ಕಡಿಮೆ ಆಗಿರುವ ಬಗ್ಗೆ ಸಾರ್ವಜನಿಕರು ತಿಳಿಸಿದರು. ಸದರಿ ವಿಷಯದ ಬಗ್ಗೆ ಗಮನಹರಿಸಿ ಸರಿಪಡಿಸಲು ನೋಡಲ್ ಅಧಿಕಾರಿಗಳು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ತಿಳಿಸಿದರು.

ಪೋಲೀಸ್/ಟ್ರಾಫಿಕ್:-

1. ವಾರ್ಡ್ ಸಮಿತಿ ಸಭೆಗೆ ಟ್ರಾಫಿಕ್ ಮತ್ತು ಕಾನೂನು ಸುವ್ಯವಸ್ಥೆ ವಿಭಾಗದ ಪೋಲೀಸ್ ಅಧಿಕಾರಿಗಳು ಹಾಜರಾಗದೇ ಇರುವುದರ ಬಗ್ಗೆ ಬೇಸರ ವ್ಯಕ್ತ ಪಡಿಸಲಾಯಿತು. ಈ ಕುರಿತು ಸದರಿ ವಿಭಾಗಗಳ ಮುಖ್ಯಸ್ಥರವರ ಗಮನಕ್ಕೆ ತರಲು ಬಿ.ಬಿ.ಎಂ.ಪಿ ಸಹಾಯಕ ಅಭಿಯಂತರವರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.
2. ಸಂಜಯನಗರ ಸೆಂಟ್ರಲ್ ಎಕ್ಸೈಜ್ ಲೇಔಟ್ ರಸ್ತೆ ಮತ್ತು 4ನೇ ಎ ಕ್ರಾಸ್, ಟೆಲಿಫೋನ್ ಎಕ್ಸ್‌ಚೇಂಜ್ ಹತ್ತಿರ ಪುಂಡಪೋಕರಿಗಳಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಪೋಲೀಸ್ ಅಧಿಕಾರಿಗಳು ಸದರಿ ರಸ್ತೆಗಳಲ್ಲಿ ಬೀಟ್ ಹೋಡೆದು ಕ್ರಮ ವಹಿಸುವಂತೆ ನೋಡಲ್ ಅಧಿಕಾರಿಗಳು ಸೂಚಿಸಿದರು. ಉಡುಪಿ ಹೋಟೆಲ್ ಹತ್ತಿರ ಸಾರ್ವಜನಿಕರು ಪಾರ್ಸೆಲ್ ತೆಗೆದುಕೊಳ್ಳಲು ತಮ್ಮ ವಾಹನಗಳನ್ನು ಮುಖ್ಯರಸ್ತೆಯ ಮೇಲೆ ನಿಲ್ಲಿಸಿ ಹೋಗುವುದರಿಂದ ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿದ್ದು, ಈ ಬಗ್ಗೆ ಟ್ರಾಫಿಕ್ ಪೋಲೀಸ್ ರವರು ಗಮನ ಹರಿಸಬೇಕಾಗಿ ನೋಡಲ್ ಅಧಿಕಾರಿಗಳು ಸೂಚಿಸಿದರು. (ಹಿಂದಿನ ನಡವಳಿಯಿಂದ ಮುಂದುವರೆಸಲಾಗಿದೆ)

ಬೆಸ್ಕಾಂ:-

1. ವಾರ್ಡ್‌ನಲ್ಲಿ ಬೆಸ್ಕಾಂ ನಿಂದ ಯು.ಜಿ ಕೇಬಲ್ ಅಳವಡಿಸುತ್ತಿರುವ ಕಾಮಗಾರಿ ಮುಕ್ತಾಯ ಹಂತದಲ್ಲಿದ್ದು, ಸದರಿ ಕಾಮಗಾರಿಯಿಂದ ನಿರ್ಮಾಣವಾದ ರಸ್ತೆ ಗುಂಡಿಗಳನ್ನು ಡಾಂಬರೀಕರಣ ಮಾಡುವ ಕಾಮಗಾರಿ ಪ್ರಗತಿಯಲ್ಲಿದ್ದು, ಸದರಿ ಕಾಮಗಾರಿಯ ಗುಣಮಟ್ಟವನ್ನು ಪರಿಶೀಲಿಸಲು ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಲು ಬಿ.ಬಿ.ಎಂ.ಪಿ ಸಹಾಯಕ ಅಭಿಯಂತರರು ರವರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

ವಾರ್ಡ್‌ನ ಅಧ್ಯಕ್ಷರು ಮಾತನಾಡುತ್ತಾ ಈ ಮೇಲಿನ ಎಲ್ಲಾ ಅಂಶಗಳನ್ನು ಕೂಡಲೇ ಬಗೆಹರಿಸುವಂತೆ ವಾರ್ಡ್ ಕಾರ್ಯದರ್ಶಿಗಳಿಗೆ ತಿಳಿಸುತ್ತಾ ಮತ್ತು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸಾರ್ವಜನಿಕರಿಗೆ ವಂದನೆಗಳನ್ನು ತಿಳಿಸುತ್ತಾ ಈ ಸಭೆಯನ್ನು ಮುಕ್ತಾಯಗೊಳಿಸಿದರು.

ವಾರ್ಡ್ ಸದಸ್ಯ ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್-67(ಹಳೆಯ ಸಂಖ್ಯೆ-19),
ಸಂಜಯನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್-67(ಹಳೆಯ ಸಂಖ್ಯೆ-19),
ಸಂಜಯನಗರ

**ಪ್ರತಿಯನ್ನು:-**

1. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
3. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.

Scanned with CamScanner